(6) ಗಮನ ಸೆಳೆಯುವ ಸೂಚನೆ

ವಿಷಯ:- ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಕುಂದಾಪುರ ಪುರಸಭೆಗೆ ಹಣ ಬಿಡುಗಡೆಯಾಗಿದ್ದರೂ ವೆಚ್ಚ ಮಾಡದಿರುವ ಬಗ್ಗೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಉಪಾಧ್ಯಕ್ಷರೇ, ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಕುಂದಾಪುರ ಪುರಸಭೆಗೆ ಹಣ ಬಿಡುಗಡೆಯಾಗಿದ್ದರೂ ಸಹ ಇದುವರೆಗೂ ವೆಚ್ಚ ಮಾಡದಿರುವ ಬಗ್ಗೆ ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೇ, ಕುಂದಾಪುರ ಮುನಿಸಿಪಾಲಿಟಿಗೆ ಐ.ಡಿ.ಎಸ್.ಎಂ.ಟಿ. ಸ್ಕೀಮ್‌ನ ಅಡಿಯಲ್ಲಿ 1994–95ರಲ್ಲಿ 199.33 ಲಕ್ಷ ರೂ. ಗಳ ಪ್ರಾಜೆಕ್ಟ್ ಕಾಸ್ಟ್‌ನ ಯೋಜನೆ ಮಂಜೂರಾಗಿದೆ. ಅದರಲ್ಲಿ 12.12.95ಕ್ಕೆ 6.13 ಲಕ್ಷ ರೂ.ಗಳನ್ನು ನಾವು ರಿಲೀಸ್ ಮಾಡಿದ್ದೇವೆ. ಆಮೇಲೆ 26.12.95ಕ್ಕೆ 32.20 ಲಕ್ಷ ರೂ.ಗಳನ್ನು ರಿಲೀಸ್ ಮಾಡಿದ್ದೇವೆ. ಹೀಗೆ ಒಟ್ಟು 38.33 ಲಕ್ಷ ರೂ. ಗಳು ರಿಲೀಸ್ ಆಗಿದೆ. ಆದರಲ್ಲಿ 6.13 ಲಕ್ಷ ರೂ. ಗಳನ್ನು ಕುಂದಾಪುರದಲ್ಲಿರುವ ಸಿಂಡಿಕೇಟ್ ಬ್ಯಾಂಕ್‌ನ ಅಕೌಂಟ್‌ನಲ್ಲಿ ಇಡಲಾಗಿದೆ ಮತ್ತು ಉಳಿದ 32.20 ಲಕ್ಷ ರೂ. ಗಳ ಹಣ ಟ್ರೆಜರಿಯಲ್ಲಿ ಇದೆ. ಇದರಲ್ಲಿ ಓಲ್ಡ್ ಬಸ್‌ಸ್ಟ್ಯಾಂಡ್ ಹತ್ತಿರ ಒಂದು ಷಾಪಿಂಗ್ ಕಾಂಪ್ಲೆಕ್ಸ್ ಮಾಡುವ ಪ್ರಪೋಸಲ್ ಇದೆ. ಅದರ ಎಸ್ಟಿಮೇಟ್ ಕಾಸ್ಟ್ 1.12 ಕೋಟಿ ರೂಪಾಯಿಗಳಾಗಿದೆ. ಅದೇ ರೀತಿ ಹೊಸ ಬಸ್‌ಸ್ಟ್ಯಾಂಡ್ ಹತ್ತಿರವೂ ಒಂದು ಷಾಪಿಂಗ್ ಕಾಂಪ್ಲೆಕ್ಸ್ ಅನ್ನು ಕಟ್ಟಬೇಕೆಂಬ ಪ್ರಪೋಸಲ್ ಸಹ ಇದೆ. ಅದರ ಎಸ್ಟಿಮೇಟ್ ಕಾಸ್ಟ್ 79.24 ಲಕ್ಷ ರೂಪಾಯಿಗಳಾಗಿದೆ. ಒಟ್ಟು 1.61 ಕೋಟಿ ರೂ. ಗಳು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಸಲುವಾಗಿ ಪೆಂಡಿಂಗ್ ಇದೆ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆದ ತಕ್ಷಣ 1.61 ಕೋಟಿ ರೂ.ಗಳನ್ನು ನಾವು ರಿಲೀಸ್ ಮಾಡುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ, 1.61 ಲಕ್ಷ ರೂ.ಗಳು ಮಂಜೂರಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ತನಕ ಹಣ ಏಕೆ ಬಿಡುಗಡೆ ಆಗಿಲ್ಲ ಮತ್ತು ಏಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಇನ್ನೂ ಆಗಿಲ್ಲ? ಏಕೆ ಈ ಸಮಸ್ಯೆ ಬಂದಿದೆ ಮತ್ತು ಏಕೆ ಕೆಲಸ ಪ್ರಾರಂಭ ಆಗಿಲ್ಲ ಎನ್ನುವಂಥಾದ್ದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೇ, ಇದು ಟೋಟಲ್ ಪ್ರಾಜೆಕ್ಟ್ ಕಾಸ್ಟ್ 199.33 ಲಕ್ಷ ರೂ. ಗಳಾಗಿದೆ. ಅದರಲ್ಲಿ 38.33 ಲಕ್ಷ ರೂ. ಗಳನ್ನು ನಾವು ರಿಲೀಸ್ ಮಾಡಿದ್ದೇವೆ. ಒಂದು ಕೋಟಿ 61 ಲಕ್ಷ ರೂ. ಗಳು ಇನ್ನೂ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಸಿಗದೇ ಬಿಡುಗಡೆಯಾಗಿಲ್ಲ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಸಲುವಾಗಿ ಅದು ಗೌರ್ನಮೆಂಟ್ ಹತ್ತಿರ

ಪೆಂಡಿಂಗ್ ಇದೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆದ ತಕ್ಷಣ 1.61 ಕೋಟಿ ರೂ. ಗಳನ್ನು ನಾವು ರಿಲೀಸ್ ಮಾಡುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ, ಈಗ ನಾನು ಕೇಳುತ್ತಾ ಇರ ತಕ್ಕಂಥಾದ್ದು, ಎಲ್ಲಾ ಮಂಜೂರಾತಿ ಆಗಿ ಒಂದು ವರ್ಷ ಕಳೆಯಿತು. ಒಂದು ವರ್ಷದಿಂದ ಇಷ್ಟರ ತನಕ 32.20 ಲಕ್ಷ ರೂ. ಗಳನ್ನು ಏತಕ್ಕೆ ಖರ್ಚು ಮಾಡಿಲ್ಲ? ಅದಕ್ಕೆ ಏನು ಸಮಸ್ಯೆ ಇದೆ? ಬಹುಶಃ ನಾನು ಕೇಳತಕ್ಕಂಥದ್ದು, ಅದಕ್ಕೆ ಅಂದಾಜು ಪಟ್ಟಿ ಈಗಾಗಲೇ ಜಿಲ್ಲಾಧಿಕಾರಿಯ ಕಛೇರಿಗೆ ಹೋಗಿದೆ. ಅಲ್ಲಿಂದ ಮಂಜೂರಾತಿ ಸಹ ಆಗಿ ಈ ಒಂದು ಹಣ ಬಿಡುಗಡೆಯಾಗಿದೆ. ಏಕೆ ಖರ್ಚು ಮಾಡುತ್ತಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್:- ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಕೇಳುವುದು 38.33 ಲಕ್ಷ ರೂ. ಗಳು ಏನಿದೆ, ಆ ಅಮೌಂಟ್ ಬಿಡುಗಡೆಯಾಗಿದೆ. ಆದರೆ ಈ ಅಮೌಂಟ್ ಖರ್ಚು ಏಕೆ ಆಗಿಲ್ಲ ಎಂದು ಅವರು ಕೇಳುತ್ತಿದ್ದಾರೆ. ಅವರು ಕೇಳುವುದು ನಿಜ. ಆದರೆ ನಾವು 12.12.95ರಲ್ಲಿ 16.13 ಲಕ್ಷ ರೂ. ಗಳನ್ನು ರಿಲೀಸ್ ಮಾಡಿದ್ದೇವೆ. ದಿನಾಂಕ 26.12.95ರಲ್ಲಿ 32.20 ಲಕ್ಷ ರೂ. ಗಳನ್ನು ರಿಲೀಸ್ ಮಾಡಿದ್ದೇವೆ. ಮಾರ್ಚ್ 31ರೊಳಗಾಗಿ ಆ ವರ್ಷದಲ್ಲಿ ಆದು ಖರ್ಚಾಗಬೇಕಾಗಿತ್ತು, ಆದಕ್ಕೆ ಮಾಡಲಿಲ್ಲ. ಈ ವರ್ಷ ಆ ದುಡ್ಡು ಸಿಂಡಿಕೇಟ್ ಬ್ಯಾಂಕ್ ಮತ್ತು ಟ್ರೆಜರಿಯಲ್ಲಿ ಇದೆ. ವರ್ಕ್ಸ್ ಅನ್ನು ಅಲ್ಲಿ ಇಮಿಡಿಯೇಟ್ಲಿ ಸ್ಟಾರ್ಟ್ ಮಾಡಲಿಕ್ಕೆ ನಾನು ಇನ್‌ಸ್ಟ್ರಕ್ಷನ್ ಕೊಡುತ್ತೇನೆ. ಮತ್ತು ಇಷ್ಟು ವರ್ಷ ಏಕೆ ಲೇಟ್ ಮಾಡಿದ್ದಾರೆ ಎನ್ನುವುದಕ್ಕೂ ಕೂಡ ನಾನು ಸ್ವಲ್ಪ ಕ್ಲಾರಿಫಿಕೇಷನ್‌ನ್ನೂ ಸಂಬಂಧಪಟ್ಟವರಿಂದ ಕೇಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ,. . .

ಉಪಾಧ್ಯಕ್ಷರು:- ಸಾಕು,

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ನಾನು ಕೇಳತಕ್ಕಂಥದ್ದು. .

ಉಪಾಧ್ಯಕ್ಷರು:- ಈಗಾಗಲೇ ಸಾಕಷ್ಟು ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಉತ್ತರ ಕೊಟ್ಟಿದ್ದಕ್ಕೇ ಕೇಳುತ್ತಿರುವುದು.

ಉಪಾಧ್ಯಕ್ಷರು:- ಎಷ್ಟು ಹೊತ್ತಿನ ತನಕ ತಾವು ಕೇಳುವುದು?

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ, ಒಂದು ವಿಚಾರವನ್ನು ಹೇಳುತ್ತೇನೆ, ನಾವು ಪ್ರಶ್ನೆ ಕೇಳತಕ್ಕಂತಹ ಉದ್ದೇಶ ಅಲ್ಲಿಯ ಸಮಸ್ಯೆ ಬಗೆಹರಿಯಬೇಕು ಎಂದು. ಇಲ್ಲಿ ಕೊಟ್ಟಿರುವ ಉತ್ತರವನ್ನು ಓದಲಿಕ್ಕೆ 3–5 ನಿಮಿಷಗಳು ಬೇಕು. ಉತ್ತರವನ್ನು ಮಾನ್ಯ ಮಂತ್ರಿಗಳು ಓದಿ ಹೇಳಲಿಲ್ಲ. ಈಗ ನನಗೆ ಓದಲಿಕ್ಕೆ ಟೈಮ್ ಇಲ್ಲ. ನೀವು ಗಡಿಬಿಡಿಯಲ್ಲಿ ಉತ್ತರ ಕೊಟ್ಟುಕೊಂಡು, 'ಉತ್ತರ ಕೊಟ್ಟಿದ್ದಾರೆ', 'ಉತ್ತರ ಕೊಟ್ಟಿದ್ದಾರೆ' ಎಂದು ಹೇಳಿದರೆ ಹೇಗೆ? ನಾವು ಬೇರೆ ಕೆಲಸವಿಲ್ಲದೇ ಇಲ್ಲಿ

ಪ್ರಶ್ನೆ ಕೇಳುತ್ತಿದ್ದೇವೆಯೇ? ಅದಕ್ಕೆ ನಾನು ಕೇಳುತ್ತಾ ಇರತಕ್ಕಂಥದ್ದು, ಸ್ಪಷ್ಟವಾಗಿ ಯಾವ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡುತ್ತೀರಿ ಮತ್ತು ಎಷ್ಟರೊಳಗೆ ಮುಗಿಸುತ್ತೀರಿ? ಎಲ್ಲಾ ಹಣ ಬಿಡುಗಡೆಯಾಗಿದೆ, ಜಿಲ್ಲಾಧಿಕಾರಿಯ ಕಛೇರಿಗೆ ಹಣ ಬಂದಿದೆ ಎನ್ನುವುದನ್ನು ತಾವು ಹೇಳುತ್ತೀರಿ. ಎಂದು ಪ್ರಾರಂಭ ಮಾಡುತ್ತೀರಿ? ನಾನು ನೇರವಾಗಿ ಈ ಪ್ರಶ್ನೆ ಕೇಳುತ್ತಿದ್ದೇನೆ, ಅದರಲ್ಲಿ ಏನಿದೆ?

ಶ್ರೀ ಮಿರಾಜುದ್ದೀನ್ ಎನ್ ಪಟೇಲ್:- ದುಡ್ಡು ಏನಿದೆ ಆ ಅಮೌಂಟ್ ರಿಲೀಸ್ ಆಗಿದೆ. ಇನ್ನೂ ವರ್ಕ್ ಏಕೆ ಸ್ಟಾರ್ಟ್ ಆಗಿಲ್ಲ ಎಂದು ತಾವು ಕೇಳುವುದು. ದುಡ್ಡು ಅಲ್‌ರೆಡಿ ಇದೆ. 38.33 ಲಕ್ಷ ರೂ. ದುಡ್ಡು ಈಗಾಗಲೇ ರಿಲೀಸ್ ಆಗಿದೆ. ಅದರ ಕೆಲಸ ಯಾವತ್ತು ಸ್ಟಾರ್ಟ್ ಮಾಡುತ್ತೀರಿ ಎಂದು ತಾವು ಕೇಳುತ್ತೀದ್ದೀರಿ? ಒಂದು ತಿಂಗಳಲ್ಲಿ ನಾನು ವರ್ಕ್ ಸ್ಟಾರ್ಟ್ ಮಾಡಿಸುತ್ತೇನೆ. 38 ಲಕ್ಷ ರೂ. ಗಳ ಅಮೌಂಟ್‌ನ ಹಣವನ್ನು ಮೊದಲು ಖರ್ಚು ಮಾಡಬೇಕು. 1.61 ಕೋಟಿ ರೂ.ಗಳು ಇನ್ನೂ ರಿಲೀಸ್ ಆಗಬೇಕೆಂಬ ಪ್ರಪೋಸಲ್ ಏನಿದೆ, ಅದು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಸಲುವಾಗಿ ಪೆಂಡಿಂಗ್ ಇದೆ. ಅದು ಅಪ್ರೂವಲ್ ಅದಾಗ ನಾವು ಆ ಅಮೌಂಟ್ ಆನ್ನು ಕೂಡ ರಿಲೀಸ್ ಮಾಡುತ್ತೇವೆ. ಈಗ ಅಲ್ಲಿ 38.33 ಲಕ್ಷ ರೂ. ಗಳ ವರ್ಕ್ ಏನಿದೆ ಅದನ್ನೂ ನಾನು ಇಮಿಡಿಯೇಟ್ಲಿ ಸ್ಟಾರ್ಟ್ ಮಾಡಿಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ, ಸಕಾಲದಲ್ಲಿ ಪಡೆದು ಹಣ ಖರ್ಚು ಮಾಡದೇ ಇದ್ದರೆ ಈ ಯೋಜನೆ ಬಿದ್ದು ಹೋಗುತ್ತದೆ. ಆದುದರಿಂದ ಆದಷ್ಟು ಶೀಘ್ರ ಹಣವನ್ನು ಖರ್ಚು ಮಾಡಿ.

ತಿಪಟೂರು ತಾಲ್ಲೂಕು ಹೊನ್ನವಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಯನ್ನು ಮೇಲ್ದರ್ಜೆಗೇರಿಸಿ ಪದವಿ ಪೂರ್ವ ಕಾಲೇಜನ್ನಾಗಿ ಮಾರ್ಪಾಡಿಸುವ ಬಗ್ಗೆ.

ಶ್ರೀ ಬಿ. ನಂಜಾಮರಿ (ತಿಪಟೂರು):- ಮಾನ್ಯ ಉಪಾಧ್ಯಕ್ಷರೇ, ತಿಪಟೂರು ತಾಲ್ಲೂಕು ಹೊನ್ನವಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಯನ್ನು ಮೇಲ್ದರ್ಜೆಗೇರಿಸಿ ಪದವಿಪೂರ್ವ ಕಾಲೇಜನ್ನಾಗಿ ಮಾರ್ಪಡಿಸುವ ಬಗ್ಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ಸದನದಲ್ಲಿಲ್ಲ. ಸರ್ಕಾರದ ಪರವಾಗಿ ಯಾರಾದರೊಬ್ಬರು ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿ):- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗ ತಾನೇ ಸದನದಲ್ಲಿದ್ದರು, ಇದೀಗ ಹೊರಗಡೆ ಹೋಗಿದ್ದಾರೆ. ಮಾನ್ಯ ಮಂತ್ರಿಗಳು ಈಗ ದೆಹಲಿಗೆ ಹೋಗುತ್ತಿದ್ದಾರೆ. ಆದ್ದರಿಂದ ಸೋಮವಾರ ಮಾನ್ಯ ಸಚಿವರಿಂದ ಸದಸ್ಯರಿಗೆ ಉತ್ತರ ಕೊಡಿಸುತ್ತೇನೆ.